ಅಸಲು ದಾವೆ ನಂಃ 258/2020                    ಪಿ.ಡಬ್ಲ್ಯೂಃ1- ಕಲ್ಲಪ್ಪ ಮರಬಸಪ್ಪನವರ

ಸಾಕ್ಷಿಯನ್ನು ಸತ್ಯ  ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 27-06-2023 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಸಿ.ವಾಯ್.ಎಚ್. ವಕೀಲರಿಂದಃ**

1. ದಾವಾ ಆಸ್ತಿ ಚಕ್ಕಬಂದಿ ನನಗೆ ಹೇಳಲು ಬರುತ್ತದೆ. ವಾದಿ ದಾವಾ ಆಸ್ತಿಯ ಪೂರ್ವಕ್ಕೆ ಮುತ್ತಣ್ಣ ಕಡೆಮನಿ ಇವರ ಆಸ್ತಿ ಇದೆ ಎಂದರೆ ನಿಜ. ಈ ದಾವೆಯಲ್ಲಿ ವಾದಿ ಅಶೋಕ ಇರುತ್ತಾರೆ. ನನಗೆ ವಾದಿ ಅಶೋಕ ಪರಿಚಯ ಇಲ್ಲ. ವಾದಿ ಅಶೋಕ ಇವರ ಜಮೀನಿನ ಪಶ್ಚಿಮಕ್ಕೆ ಬಸವರಾಜ ಮೆಣಸಗಿ ಇವರ ಜಮೀನು ಇದೆ ಎಂದರೆ ನಿಜ. ಉತ್ತರಕ್ಕೆ ಸಂಗಪ್ಪ ಮೆಣಸಗಿ ಇವರ ಜಮೀನು ಇದೆ ಎಂದರೆ ನಿಜ. ಅದೇ ರೀತಿ ದಕ್ಷಿಣಕ್ಕೆ ಶಂಕ್ರಪ್ಪ ಓಲಿ ಇವರ ಜಮೀನು ಇದೆ ಎಂದರೆ ನಿಜ.

2 ವಾದಿ ಅಶೋಕ ದಿನಾಂಕಃ 21-05-2018 ರಂದು ದಾವಾ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಮೋಸದಿಂದ ವಾರಸಾ ಮಾಡಿಸಿ ಖರೀದಿ ಆಗಿದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ದಾವಾ ಆಸ್ತಿ ಅಂದಪ್ಪ ಗೌಡಣ್ಣವರ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲೀಲ. ಸಾಕ್ಷಿ ನಮ್ಮ ಅಜ್ಜ ಯಮನಪ್ಪ ಮತ್ತು ಅಂದಪ್ಪ ಗೌಡಣ್ಣವರ ಇವರ ಹೆಸರಿನಲ್ಲಿ ಜಂಟಿ ಇತ್ತು ಎಂದು ಹೇಳುತ್ತಾರೆ. 2018 ಕ್ಕಿಂತ ಮುಂಚಿತವಾಗಿ ನಮ್ಮ ಅಜ್ಜ ಯಮನಪ್ಪ ಮತ್ತು ಅಂದಪ್ಪ ಗೌಡಣ್ಣವರ ಇವರ ಹೆಸರಿನಲ್ಲಿ ಜಂಟಿ ಇದ್ದ ಬಗ್ಗೆ ಉತಾರ ನೋಡಿದ್ದೇನೆ. 2018 ಕ್ಕಿಂತ ಹಿಂದಿನ ಎಲ್ಲಾ ಉತಾರಗಳನು ನೋಡಿದ್ದೇನೆ. ಅದರಲ್ಲಿ ನಮ್ಮ ಅಜ್ಜ ಯಮನಪ್ಪ ಮತ್ತು ಅಂದಪ್ಪ ಗೌಡಣ್ಣವರ ಇವರ ಹೆಸರಿನಲ್ಲಿ ಜಂಟಿ ಇದ್ದ ಬಗ್ಗೆ ಉತಾರ ಇವೆ. ಆ ರೀತಿ ನನ್ನ ಅಜ್ಜ ಮತ್ತು ಅಂದಪ್ಪನ ಹೆಸರು ಜಂಟಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಂದಪ್ಪ ಗೌಡಣ್ಣವರ ಹೆಸರಿನಲ್ಲಿ ಮಾತ್ರ ಜಮೀನು ಇತ್ತು ಎಂದರೆ ಸರಿಯಲ್ಲ. ವಾದಿ ಖರೀದಿ ಹಿಡಿದ ವಿಚಾರ ನನಗೆ ಗೊತ್ತಿಲ್ಲ. ಮೋಸದಿಂದ ಮಾಡಿದ್ದಾರೆ. ನಾನು ಈ ದಾವೆಯಲ್ಲಿ ತಕರಾರು ಹಾಕಿದ್ದೇನೆ. ಆ ತಕರಾರಿನಲ್ಲಿ ವಾದಿ ಬೇಕಾಯ್ದೆ ಶೀರಿ ಖರೀದಿ ಮಾಡಿದ್ದಾನೆ ಎಂದು ಬರೆಸಿದ್ದೇನೆ. ವಾದಿ ಖರೀದಿ ಹಿಡಿದ ವಿಚಾರ ನನಗೆ ಗೊತ್ತಿತ್ತು, ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3.	ದಾವಾ ಆಸ್ತಿ ಈಗಲೂ ಸಹ ನನ್ನ ಮತ್ತು ಅಂದಪ್ಪನ ಹೆಸರಿನಲ್ಲಿ ಜಂಟಿ ಇದೆ. 2017, 2018, 2019 ಮತ್ತು 2020 ನನ್ನ ಹೆಸರನ್ನು ಕೂಡಿಸಿದ್ದೇನೆ. ನಾನು ಎಸಿ ಕಛೇರಿಯಲ್ಲಿ ಅಫೀಲು ಹೋಗಿದ್ದೆ, ಆ ಆದೇಶ ಮೇಲೆ ನನ್ನ ಹೆಸರನ್ನು ಕೂಡಿಸಲಾಗಿದೆ. ನನ್ನ ಅಜ್ಜ ಯಮನಪ್ಪ 1957 ರಲ್ಲಿ ಸತ್ತಿದ್ದಾನೆ. ನನ್ನ ತಾಯಿ ಬಸವ್ವ ಯಮನಪ್ಪನ ಮಗಳು ಎಂದರೆ ನಿಜ. ಯಮನಪ್ಪ ಸತ್ತ ನಂತರ ದಾವಾ ಆಸ್ತಿಗೆ ನಾನು ಮತ್ತು ನನ್ನ ತಾಯಿ ಅಂದಾಜು 30 ವರ್ಷಗಳ ನಂತರ ಮಾಡಿಸಿದ್ದೇವೆ, ನಮ್ಮ ಆರ್ಥಿಕ ಪರಿಸ್ಥಿತಿ ಆಗ ಸರಿ ಇರಲಿಲ್ಲ, ಆದ್ದರಿಂದ ಮಾಡಿಸಿರಲಿಲ್ಲ ಎಂದು ಹೇಳುತ್ತಾರೆ. ನಮ್ಮ ಅಜ್ಜ ಸತ್ತ 30 ವರ್ಷಗಳ ನಂತರ ಖಾತೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. 2018 ರಲ್ಲಿ ವಾದಿ ದಾವಾ ಆಸ್ತಿಯನ್ನು ಖರೀದಿ ಹಿಡಿದಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮೋಸನಿಂದ ಖರೀದಿ ಆಗಿದ್ದೆ ಎಂದು ಹೇಳುತ್ತಾರೆ.

4.	2018 ರಲ್ಲಿ ವಾದಿ ಖರೀದಿ ಹಿಡಿದ ವಿಚಾರ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ನನಗೆ 2018 ರಲ್ಲಿ ಯೇ ಆ ವಿಚಾರ ಗೊತ್ತಾಯಿತು. ಖರೀದಿ ವ್ಯವಹಾರ ರೂ.1,93,000/- ಆಗಿದೆ ಎಂದರೆ ನಿಜ. ಖರೀದಿ ಆದ ನಂತರ ವಾದಿ ಆ ಜಮೀನನ್ನು ಬಿತ್ತಲು ಬಂದಿದ್ದ, ಆಗ ನಾವುಇದು ಮೋಸದಿಂದ ಖರೀದಿ ಆಗಿದೆ ಎಂದು ಅವನಿಗೆ ಬಿತ್ತಲು ಬಿಡಲಿಲ್ಲ. ಆಗ ಜಗಳ ಆಗಿತ್ತು ಎಂದರೆ ನಿಜ. ಆ ಬಗ್ಗೆ ವಾದಿ ಪೊಲೀಸ್ ಕಂಪ್ಲೇಟ್ ಕೊಟ್ಟಿದ್ದಾರೆ ಎಂದರೆ ನಿಜ. ಸಾಕ್ಷಿ ನಾವು ಸಹ ಪೊಲೀಸ್ ಕಂಪ್ಲೇಟ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. 2018 ಕ್ಕಿಂತ ಮುಂಚಿತವಾಗಿ ನಮ್ಮದು ಮತ್ತು ಅಂದಪ್ಪ ಗೌಡಣ್ಣವರ ಇವರ ಮಧ್ಯ ಯಾವುದೇ ತಕರಾರು ಇರಲಿಲ್ಲ ಎಂದರೆ ನಿಜ.

5.	ನಮ್ಮ ಅಜ್ಜನಿಗೆ ಒಟ್ಟು 1 ಎಕರೆ 30 ಗುಂಟೆ ಮತ್ತು 2 ಮನೆಗಳು ಇದ್ದವು. ವಿ.ಪಿ.ಸಿ. 646 ನಮಗೆ ಮತ್ತು 654 ಕ್ಕೂ ಅಂದಪ್ಪ ಗೌಡಣ್ಣಇವರಿಗೆ ಹೋಗಿತ್ತು ಎಂದರೆ ನಿಜ. ವಿ.ಪಿ.ಸಿ. 646 ಮನೆ ನಮ್ಮ ಬಂದ ನಂತರ ನನ್ನ ತಾಯಿ ಸತ್ತ ಮೇಲೆ ನನ್ನ ತಂದೆ ವಾರಸಾ ಪ್ರಕಾರ ತನ್ನ ಹೆಸರನ್ನು ಕೂಡಿಸಿದ್ದರು ಎಂದರೆ ನಿಜ. ನಂತರ ನನ್ನ ತಂದೆ ಮತ್ತು ಅಂದಪ್ಪ ಗೌಡಣ್ಣವರ ಇವರು ಸೇರಿ ನಿಂಗಪ್ಪ ಕೆಂಪಸಂಗಣ್ಣವರ ಇವರಿಗೆ ವಿ.ಪಿ.ಸಿ. 646 ಮನೆಯನ್ನು ಮಾರಾಟ ಮಾಡಿದ್ದರು ಎಂದರೆ ನಿಜ. ಆ ಸಮಯದಲ್ಲಿ ಆ ಮನೆ ನಮ್ಮ ತಂದೆ ಮತ್ತು ಅಂದಪ್ಪ ಗೌಡಣ್ಣವರ ಇವರ ಹೆಸರಿನಲ್ಲಿ ಜಂಟಿ ಇರಲಿಲ್ಲ. ನಮ್ಮ ತಂದೆ ಮತ್ತು ಅಂದಪ್ಪ ಗೌಡಣ್ಣವರ ಇಬ್ಬರೂ ಸೇರಿ ನಿಂಗಪ್ಪ ಕೆಂಪಸಂಗಣ್ಣವರ ಇವರಿಗೆ ಖರೀದಿ ಕೊಟ್ಟಿದ್ದಾರೆ. ಖರೀದಿ ಪತ್ರ ನೋಡಿದ್ದೇನೆ. ಅದರಲ್ಲಿ ನನ್ನ ತಂದೆ ಖರೀದಿ ಕೊಟ್ಟಿದ್ದಾಗಿ ಮಾತ್ರ ಇದೆ ಎಂದು ಹೇಳುತ್ತಾರೆ. ವಿ.ಪಿ.ಸಿ. 646 ಮನೆಯನ್ನು

ನಮ್ಮ ತಂದೆ ಮತ್ತು ಅಂದಪ್ಪ ಗೌಡಣ್ಣವರ ಇಬ್ಬರೂ ಸೇರಿ ನಿಂಗಪ್ಪ ಕೆಂಪಸಂಗಣ್ಣವರ ಇವರಿಗೆ ಖರೀದಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿ.ಪಿ.ಸಿ. 646 ನಮಗೆ ಮತ್ತು 654 ಕ್ಕೂ ಅಂದಪ್ಪ ಗೌಡಣ್ಣಇವರಿಗೆ ಆದಂತಹ ಇಸವಿ ನನಗೆ ಗೊತ್ತಿಲ್ಲ. ಸುಮಾರು 20–30 ವರ್ಷಗಳ ಹಿಂದೆ ಈ ರೀತಿ ಬಂದಿದ್ದೆ ಎಂದರೆ ನಿಜ. ನನ್ನ ತಾಯಿ ಮತ್ತು ಅಂದಪ್ಪ ಗೌಡಣ್ಣ ಇವರ ಮಧ್ಯ ವಾಟ್ನಿಯಾಗಿದೆ ಎಂದರೆ ಸರಿಯಲ್ಲ. ವಿ.ಪಿ.ಸಿ. 646 ಮನೆ ನಮಗೆ ಮತ್ತು 654 ಮನೆ ಅಂದಪ್ಪ ಗೌಡಣ್ಣ ಇವರಿಗೆ ಹೋಗಲಿ ಎಂದು ಹಿರಿಯರು ಆಪಸಾತ್ ನಲ್ಲಿ ಹೇಳಿದ್ದರು ಎಂದರೆ ನಿಜ. ಸಾಕ್ಷಿ ನಂತರ ಅಂದಪ್ಪ ಗೌಡಣ್ಣಇವರ ಮನೆ ಕಟ್ಟಿಸಿದ್ದಾಗಿ ಹೇಳುತ್ತಾರೆ. ವಿ.ಪಿ.ಸಿ. 646 ಮತ್ತು 654 ಮನೆಯ ಅಳತೆ ಮತ್ತು ಚಕ್ಕಬಂದಿ ಗೊತ್ತಾಗುವುದಿಲ್ಲ, ಆದರೆ ಅಂದಾನಪ್ಪ ಗೌಡಣ್ಣವರ ಇವರಿಗೆ ಸೇರಿದ ಮನೆ ದೊಡ್ಡದು, ನಮಗೆ ಬಂದಿದ್ದು ಸಣ್ಣದು ಎಂದು ಹೇಳುತ್ತಾರೆ. ವಿ.ಪಿ.ಸಿ. 646 ಮತ್ತು 654 ಮನೆಗಳು ಬಾಳಪ್ಪ ಅಜ್ಜನಿಗೆ ಸೇರಿದ ಮನೆ ಎಂದರೆ ನಿಜ.

6. ಅಂದಾನಪ್ಪ ಗೌಡಣ್ಣಇವರು ತಮ್ಮಗೆ ಬಂದತಂಹ 654 ಮನೆ ಇದ್ದ ಜಾಗದಲ್ಲಿ ಹೊಸದಾಗಿ ಮನೆ ಕಟ್ಟಿಸಿದ್ದಾರೆ ಎಂದರೆ ನಿಜ. ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿ ಅಂದಾನಪ್ಪ ಗೌಡಣ್ಣವರಿಗೆ ಇರಲಿಲ್ಲ ಎಂದರೆ ನಿಜ. ದೊಡ್ಡ ಮನೆ ಕಟ್ಟಿಸಲು ಸಾಕಷ್ಟು ಹಣ ಬೇಕಾಗಿತ್ತು ಎಂದರೆ ನಿಜ. ಹಣ ಬೇಕಾಗಿದ್ದರಿಂದ ದಾವಾ ಆಸ್ತಿಯನ್ನು ಅಶೋಕನಿಗೆ ಮಾರಿ ಮನೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಮನೆ ಮಾರಿಸಿ ಅಲ್ಲಿ ಮನೆ ಕಟ್ಟಿಸಿದ್ದಾಗಿ ಹೇಳುತ್ತಾರೆ. ಸಾಕ್ಷಿ ನಮ್ಮ ಮನೆಯನ್ನು ಮಾರಿಸಿ ಇಬ್ಬರೂ ಸೇರಿ ಆ ಮನೆಯನ್ನು ತೆಗೆದುಕೊಳ್ಳೋಣ ಎಂದು ಮನೆ ಕಟ್ಟಿಸಿದ್ದಾಗಿ ಹೇಳುತ್ತಾರೆ. ನಾವು ಮನೆ ಕಟ್ಟಿಸಲು ದುಡ್ಡು ಕೊಟ್ಟಿದ್ದೇವೆ, ಎಷ್ಟು ಹಣ ಕೊಟ್ಟಿದ್ದೇವೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.